1	2	3	4
6.	ಶ್ರೀಮತಿ ಚಂದ್ರಾವತಿ ಕೇರಾಫ್ ರಾಮಚಂದ್ರ ಪೂಜಾರಿ, ಪಡೀಲುಮನೆ, ಕುಳಾಯಿ, ಮಂಗಳೂರು.	16:1ಎ	1.30
7.	ಶ್ರೀ ಕೇಶವ ಅಮೀನ್ ಬಿನ್ ಜಿ. ತುಕ್ರ ಪೂಜಾರಿ, ಕೋಕಟ್ಟೆ, 62ನೇ ತೋಕೂರು.	27:2	1.23
8.	ಶ್ರೀ ಶೇಖರ ಅಮೀನ್ ಬಿನ್ ಜಿ. ತುಕ್ರ ಪೂಜಾರಿ, ಜೋಕಟ್ಟೆ 62 ತೋಕೂರು.	26:1	1.31
9.	ಶ್ರೀ ಹಣಪತಿ ಭಟ್ ಬಿನ್ ಮಾಧವಭಟ್ ಬಡಗ ಎಕ್ಕಾರು	87:1	2.00
10.	ಶ್ರೀಮತಿ ಸರೋಜನಿ ಬಿನ್ ದೂಪುಪ್ಪ ಬಂಗೇರ ವೈಲ ಜಪೆ	163:1	1.00
11.	ಶ್ರೀಮತಿ ಬಿ. ಸೋಮಸುಂದರಂ ಸಾಲಿಯಾನ (ಮಾಜಿ ಸೈನಿಕ) ಬಿನ್ ಎ. ರಾಮಚಂದ್ರ, ಸಸಿಹಿತ್ಲು, ಹೊಗೆಬಾರ್, ಮಂಗಳೂರು.	28:1	1.50
12.	ಶ್ರೀ ರಾಜ ಶೆಟ್ಟಿ ಬಿನ್ ಗೋವಿಂದ ಶೆಟ್ಟಿ, ಹೇಮಲತಾ ಶೆಟ್ಟಿ ಕಂಪೌಂಡ್ ಮತ್ತು ಮೊಗರು, ಮಂಗಳೂರು, ಕಂಕನಾಡಿ	16:1ಎ	1.50
13.	ಶ್ರೀ ಶೇಖರ ಶೆಟ್ಟಿ ಬಿನ್ ಮುದ್ದು ಶೆಟ್ಟಿ, ತಂಕ ಎಕ್ಕಾರು ಮಂಡಲ, ಪಂಚಾಯತ್ ಕಛೇರಿ ಬಳಿ.	27:3	1.26

ಸುರತ್ಕಲ್ ಕ್ಷೇತ್ರಕ್ಕೆ ಸಂಬಂಧಿಸಿದ ಭೂನ್ಯಾಯ ಮಂಡಳಿಯ ಪ್ರಕರಣಗಳು

3008 - ಶ್ರೀ ಕುಂಬ್ಳೆ ಸುಂದರರಾವ್(ಸುರತ್ಕಲ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸುರತ್ಕಲ್ ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಭೂ ನ್ಯಾಯ ಮಂಡಳಿಯಲ್ಲಿ 1-1-94 ರಿಂದ ಎಷ್ಟು ಪ್ರಕರಣಗಳು ದಾಖಲಾಗಿವೆ?*

ಆ) *ಈ ಪ್ರಕರಣಗಳಲ್ಲಿ 30-6-97ರ ಹೊತ್ತಿಗೆ ವಿಲೇವಾರಿ ಆದ ಪ್ರಕರಣಗಳೆಷ್ಟು, ಅವುಗಳಲ್ಲಿ ಗೇಣಿದಾರರ ಪರವಾಗಿ ಆದ ಪ್ರಕರಣಗಳ ಸಂಖ್ಯೆ ಎಷ್ಟು?*

ಇ) *ಬಾಕಿ ಉಳಿದ ಪ್ರಕರಣಗಳಲ್ಲಿ ಫಾರಂ ನಂಬರ್ 7 ಮತ್ತು 2ಎ ಮತ್ತು 2ಇ ಗಳಲ್ಲಿ ಸಲ್ಲಿಸಿದ ಗೇಣಿದಾರರ ಸಂಖ್ಯೆ ಎಷ್ಟು?*

ಈ) ಅವುಗಳ ತೀರ್ಮಾನಕ್ಕೆ ವಿಳಂಬವಾಗಲು ಕಾರಣಗಳೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) ಭೂ ಸುಧಾರಣೆ ಕಾಯ್ದೆ 1961ರ ಅಡಿ ಭೂ ಸುಧಾರಣೆ ನಿಯಮಾವಳಿ 19 (1)ರ ಅನುಸಾರ ನಿಗಧಿತ ನಮೂನೆ 7ರಲ್ಲಿ ಅರ್ಜಿಯ ನಮೂನೆ 7ನ್ನು ಸಲ್ಲಿಸಲು ಕೊನೆಯ ದಿನಾಂಕ 30-6-79, ಮತ್ತು ನಮೂನೆ 2ಎ ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 31-3-83 ಆಗಿರುತ್ತದೆ. ಆದುದರಿಂದ ಭೂ ನ್ಯಾಯ ಮಂಡಳಿಯ ದಿನಾಂಕ : 1-1-94ರಿಂದ ಪ್ರಕರಣಗಳು ದಾಖಲಾಗಿರುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಮೇಲ್ಕಂಡಂತೆ ನಿಗಧಿಪಡಿಸಿರುವ ದಿನಾಂಕದೊಳಗೆ ದಾಖಲಾದ 7,133 ಪ್ರಕರಣಗಳ ಪೈಕಿ 5601 ಪ್ರಕರಣಗಳು ಗೇಣಿದಾರರ ಪರವಾಗಿ ತೀರ್ಪಾಗಿದ್ದು 1,532 ಪ್ರಕರಣಗಳು ತಿರಸ್ಕೃತವಾಗಿವೆ. ಯಾವುದೇ ಪ್ರಕರಣಗಳು ಭೂ ನ್ಯಾಯ ಮಂಡಳಿಯ ಮುಂದೆ ಬಾಕಿ ಇರುವುದಿಲ್ಲ. ಆದ್ದರಿಂದ 30-6-97ರ ಹೊತ್ತಿಗೆ ವಿಲೇವಾರಿಯಾದ ಪ್ರಕರಣಗಳು ಮತ್ತು ಅವುಗಳಲ್ಲಿ ಗೇಣಿದಾರರ ಪರವಾಗಿರುವ ಪ್ರಕರಣಗಳ ಸಂಖ್ಯೆ : ಬಗ್ಗೆ ಉತ್ತರ ಉದ್ಭವಿಸುವುದಿಲ್ಲ.

ಇ) ಮೇಲ್ಕಂಡ ಪ್ರಶ್ನೆಗಳಿಗೆ ನೀಡಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಮೇಲ್ಕಂಡಂತೆ ದಾಖಲಾದ ಅರ್ಜಿಗಳು ಈಗಾಗಲೇ ಭೂ ನ್ಯಾಯ ಮಂಡಳಿಯಲ್ಲಿ ತೀರ್ಮಾನವಾಗಿದ್ದು, ಉಚ್ಚ ನ್ಯಾಯಾಲಯದಿಂದ 12 ರಿಮ್ಯಾಂಡ್ ಆದ ಪ್ರಕರಣಗಳು ಮಾತ್ರ ಬಾಕಿ ಇವೆ. ಆದ್ದರಿಂದ ಈ ಪ್ರಶ್ನೆಗೆ ಉತ್ತರ ಸಹ ಉದ್ಭವಿಸುವುದಿಲ್ಲ.

ಸಾರಿಗೆ ಸುಧಾರಣೆ ಕುರಿತು

3009 - ಡಾ|| ಎಂ. ಪಿ. ಕರ್ಕಿ (ಕುಮಟಾ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಪ್ರಕಟಿಸಿದಂತೆ ಕೆ.ಎಸ್.ಆರ್.ಟಿ.ಸಿ. ಯನ್ನು ವಿಭಜಿಸುವ ಕಾರ್ಯವು ಎಂದು ನಡೆಯುತ್ತದೆ.

ಆ) ವಿಭಜನೆ ಆದ ನಂತರ ಲಾಭ ಬರುವ ಡಿವಿಜನ್‌ಗಳಿಗೆ ಹೆಚ್ಚಿನ ಸವಲತ್ತನ್ನು ಕೊಡುವ ಯೋಜನೆ ಸರ್ಕಾರಕ್ಕಿದೆಯೇ?

ಇ) ಹಾಗಿದ್ದಲ್ಲಿ ಯಾವ ಸವಲತ್ತುಗಳನ್ನು ಒದಗಿಸಲಾಗುವುದು?

ಶ್ರೀ ಪಿ. ಜಿ. ಆರ್ ಸಿಂಧ್ಯಾ (ಸಾರಿಗೆ ಸಚಿವರು) :

ಅ) ಈಗಾಗಲೇ ಆಗಸ್ಟ್ 15ರಂದು, ಬೆಂಗಳೂರು ಮಹಾನಗರ ಸಾರಿಗೆಯನ್ನು ಕೆ.ಎಸ್.ಆರ್.ಟಿ.ಸಿ.ಯಿಂದ ವಿಭಜಿಸಲಾಗಿದೆ. ನವೆಂಬರ್ 1ನೇ ತಾರೀಖಿನಂದು ವಾಯವ್ಯ ಕರ್ನಾಟಕ